ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ.ನಂ. 2410/2015

ಸರ್ಕಾರದ ಪರ ಆರಕ್ಷಕ ಉಪನಿರೀಕ್ಷಕರು,
ಕುಂದಾಪುರ ಪೋಲಿಸ್ ಠಾಣೆ .... ಪಿರ್ಯಾದುದಾರರು

ಃ ವಿರುದ್ಧ ಃ

1. ಡಾ. ಶಿವರಾಮ ಶೆಟ್ಟಿ, 74 ವರ್ಷ,
ವಾಸಃ ಕಲ್ಲಾಗರ, ವಡೇರಹೋಬಳಿ ಗ್ರಾಮ,
ಉಡುಪಿ ತಾಲೂಕು.

2. ಪರಿಕ್ಷೀತ್, 18 ವರ್ಷ,
3. ಜಲಜಾಕ್ಷೀ, 50 ವರ್ಷ,
4. ಸಾವಿತ್ರಿ, 60 ವರ್ಷ,

2 ರಿಂದ 4ನೇಯವರ
ವಾಸಃ ಎಕೆಜಿ ರಸ್ತೆ,
ವಡೇರಹೋಬಳಿ ಗ್ರಾಮ,
ಉಡುಪಿ ತಾಲೂಕು. ..... ಆರೋಪಿತರು

<u>ದೋಷಾರೋಪಣೆ</u>

ಶ್ರೀ ಶ್ರೀಕಂಠ ಎನ್.ಎ., ಬಿ.ಎ., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ

ವಡೇರಹೋಬಳಿ ಗ್ರಾಮದ ಎಕೆಜಿ ರಸ್ತೆಯ ಶ್ರೀದೇವಿ ನರ್ಸಿಂಗ್ ಹೋಮ್ ಬಳಿ ದಿ. 10.02.2015 ರಂದು ಪಿರ್ಯಾದಿ ನಾಗರತ್ನರವರು ತನ್ನ ಗಂಡ ಸದಾನಂದ ಹವಾಲ್ದಾರ್, ಮಗ ಹರೀಶನವರೊಂದಿಗೆ ಮನೆಯ ಪೂರ್ವದಲ್ಲಿ ತೆಂಗಿನ ಕಟ್ಟೆಯನ್ನು ಸರಿಪಡಿಸಿ ಮಣ್ಣು ತುಂಬುತ್ತಿರುವಾಗ ಬೆಳಿಗ್ಗೆ 10.45 ಗಂಟೆಗೆ 1ನೇ ಆರೋಪಿತರಾದ ನೀವು 'ಬೇವಾರ್ಸಿ ರಂಡೆ ಮಕ್ಕಳೆ ನಿಮ್ಮ ಜಾಗದ ರಿಬಿಟ್‌ಮೆಂಟ್ ಯಾಕೆ ತೆಗೆದದ್ದು? ನನ್ನ ಜಾಗದ ಕಲ್ಲನ್ನು ಯಾಕೆ ತೆಗೆಯುತ್ತೀದ್ದೀರಿ, ನಿಮಗೆ ಈ ದಿವಸ ಗ್ರಹಚಾರ ಬಿಡಿಸುತ್ತೇನೆ' ಎಂದು ಅವಾಚ್ಯ ಶಬ್ದದಿಂದ ಬೈದು ಅವಮಾನಗೊಳಿಸಿ ಅವರನ್ನು ಬೇರೆ ಅಪರಾಧ ಮಾಡುವಂತೆ ಪ್ರಚೋದಿಸಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ ಆ ಪೈಕಿ 1ನೇ ಆರೋಪಿತರಾದ ನೀವು ಸಾಕ್ಷಿ1/ಶ್ರೀಮತಿ ನಾಗರತ್ನ ಹವಾಲ್ದಾರರವರನ್ನು ವಿವಸ್ತ್ರಗೊಳಿಸುವ ಸಲುವಾಗಿ ಮೈಮೇಲೆ ಕೈ ಹಾಕಿ ಅವರು ಧರಿಸಿದ್ದ ನೈಟಿಯನ್ನು ಎಳೆದು ಹರಿದು ಮಾನಕ್ಕೆ ಕುಂದುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 354 ಬಿ ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ, 1 ರಿಂದ 4ನೇ ಆಪಾದಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ ಸ್ವಇಚ್ಛೆಯಿಂದ ಸಾಕ್ಷಿ 1ನೇಯವರಿಗೆ ಕೈಯಿಂದ ಹೊಡೆದು, ಕಾಲಿನಿಂದ ತುಳಿದು ನೆಲಕ್ಕೆ ಬೀಳಿಸಿ ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು ಆ ಮೂಲಕ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

4. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ, 1 ರಿಂದ 4ನೇ ಆಪಾದಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ ಆ ಪೈಕಿ 1ನೇ ಆರೋಪಿತರಾದ ನೀವು ಫಿರ್ಯಾದಿದಾರರ ಮೈಮೇಲೆ ಕಲ್ಲನ್ನು ಎತ್ತಿ ಹಾಕಿ ಎಡ ಕೈಯ ಮಧ್ಯಬೆರಳಿಗೆ ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು ಆ ಮೂಲಕ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ10.01.2019

(ಶ್ರೀಕಂಠ ಎನ್.ಎ.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

Phs